ಬರುವ ವಿಚಾರದಲ್ಲಿ ಈ ಸರಕಾರದ ನೀತಿ ಏನಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈ ಸರಕಾರದ ನೀತಿ ಕೂಡ ಹೊಸ ಜಿಲ್ಲೆಗಳನ್ನು ಮಾಡಬೇಕು ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಆಮೇಲೆ ಲಾ ಅಂಡ್ ಆರ್ಡರ್ ಮೇಂಟೀನ್ ಮಾಡುವುದಕ್ಕಾಗಲೀ ಡೆವಲಪ್‌ಮೆಂಟ್ ದೃಷ್ಟಿಯಿಂದ ಆಗಲೀ ಹೊಸ ಜಿಲ್ಲೆಗಳನ್ನು ಮಾಡಬೇಕೆಂಬ ದೃಷ್ಟಿಯಿಂದ ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿರುತ್ತೇವೆ. ಮತ್ತು ಆಫಿಯಲ್ ಸಬ್‌ಕಮಿಟಿ ಮಾಡಿದ್ದೇವೆ. ಆದಷ್ಟು ಬೇಗನೆ ಕ್ರಮ ಕೈಗೊಳ್ಳಬೇಕೆನ್ನುವ ದೃಷ್ಟಿಯಿಂದ ನಾವು ಹೆಜ್ಜೆಯನ್ನು ಹಾಕುತ್ತೇವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ವೇಯರ್ಸ್‌ಗಳ ಹುದ್ದೆಗಳ ಭರ್ತಿ

3529 - ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಎಷ್ಟು ಜನ ತಾಲ್ಲೂಕು ಸರ್ವೇಯರ್ಸ್ ಇದ್ದಾರೆ (ಖಾಲಿ ಇರುವ ಸ್ಥಳಗಳ ಬಗ್ಗೆ ವಿವರ ನೀಡುವುದು)

ಆ) ಹೋಬಳಿ ಮಟ್ಟದ ಸರ್ವೇಯರ್ಸ್ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿರುವರೇ ?

ಇ) ಈಗ ಖಾಲಿಯಿರುವಂತಹ ಹುದ್ದೆಗಳೆಷ್ಟು ?

ಈ) ತಾಲ್ಲೂಕು ಮಟ್ಟದಲ್ಲಿ ಖಾಲಿ ಇರುವ ಸರ್ವೇಯರ್ ತುಂಬಲು ಸರ್ಕಾರವೇನಾದರೂ ಕ್ರಮ ಕೈಗೊಂಡಿದೆಯೇ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಂಬತ್ತು ತಾಲ್ಲೂಕು ಸರ್ವೇಯರ್ ಇದ್ದಾರೆ. (ಖಾಲಿ ಸ್ಥಳಗಳು ಇರುವುದಿಲ್ಲ)

ಆ) ಹೌದು.

ಇ) ಒಂದು.

ಈ) ತಾಲ್ಲೂಕು ಮಟ್ಟದಲ್ಲಿ ಯಾವ ಹುದ್ದೆಗಳೂ ಖಾಲಿ ಇರುವುದಿಲ್ಲ.

ಶ್ರೀ ಎ.ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಮಟ್ಟದಲ್ಲಿ ಎಷ್ಟು ಜನ ತಾಲ್ಲೂಕು ಸರ್ವೇಯರ್ಸ್ ಇದ್ದಾರೆ ಎಂದು ಕೇಳಿದ್ದೆ ಎಲ್ಲಾ ತಾಲ್ಲೂಕುಗಳಲ್ಲಿ ಇದ್ದಾರೆ ಎಂದು ಉತ್ತರ ಒದಗಿಸಿದ್ದಾರೆ. ಆದರೆ ಎಷ್ಟು ಜನ ಇದ್ದಾರೆ. ಎಂಬ ಉತ್ತರವನ್ನು ಅವರು ಕೊಟ್ಟಿಲ್ಲ. ಹೋಬಳಿ ಮಟ್ಟದ ಸರ್ವೇಯರ್ಸ್ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲೋಕಿನಲ್ಲಿರುವರೇ ಎಂಬುದಕ್ಕೆ ಹೌದು ಎಂಬ ಉತ್ತರ ಕೊಟ್ಟಿದ್ದಾರೆ. ಖಾಲಿ ಇರುವ ಹುದ್ದೆಗಳು ಎಷ್ಟು ಎಂದು ಕೇಳಿದ್ದೆ ತಾಲ್ಲೂಕಿನಲ್ಲಿ ಅಥವಾ ಜಿಲ್ಲೆಯಲ್ಲಿ ಒಂದೇ ಒಂದು ಖಾಲಿ ಇರತಕ್ಕಂಥಾದ್ದು ಎಂಬ ವಿಚಾರ ತಿಳಿಸಿದ್ದಾರೆ. ಹೊಳಲ್ಕೆರೆ ತಾಲೋಕಿನಲ್ಲಿ ಎಷ್ಟು ಜನ ಸರ್ವೇಯರ್ಸ್ ಇದ್ದಾರೆ ಮತ್ತು ಖಾಲಿ ಇರತಕ್ಕಂಥ ಹುದ್ದೆಗಳು ಎಷ್ಟು ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆಯ ಬಗ್ಗೆ ಕೇಳಿದುದನ್ನು ಹೇಳಿದ್ದೇನೆ ಸ್ಯಾಂಕ್ಷನ್‌ಡ್ ಸ್ಟ್ರೆಂಥ್ ಚಿತ್ರದುರ್ಗ ಸಬ್‌ಡಿವಿಷನ್ 26 ದಾವಣಗೆರೆ ಸಬ್‌ಡಿವಿಜನ್ 25 ಒಟ್ಟು 51 ಸರ್ವೇಯರ್ಸ್ ಅಲ್ಲಿದ್ದಾರೆ. ಒಂದು ಹುದ್ದೆ ಮಾತ್ರ ಖಾಲಿ ಇದೆ. ಇನ್ನು 50 ಜನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎ.ವಿ. ಉಮಾಪತಿ : ಸನ್ಮಾನ್ಯ ಅಧ್ಯಕ್ಷರೇ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ

ಮಾಡುತ್ತಿದ್ದೇನೆ. ಅಲ್ಲಿ ಒಬ್ಬನೇ ಒಬ್ಬ ವರ್ಕೀಯರ್ ಇದ್ದಾನೆ. ಬಹುಶಃ ಮಾನ್ಯ ಮಂತ್ರಿಗಳಿಗೆ ಸರಿಯಾಗಿ ಮಾಹಿತಿ ಕೊಟ್ಟಿಲ್ಲ ಎಂದು ಕಾಣುತ್ತಿದೆ. ನನ್ನ ಕ್ಷೇತ್ರದಲ್ಲಿ ಈಗೇನು ಸೈಟ್‌ಫಾಲ್ ಸೈಟ್‌ಲೆಸ್ ಕೊಡಬೇಕೆಂದು ಸರಕಾರದ ನೀತಿ ಇದೆ ಈಗಾಗಲೇ ಅದಕ್ಕಾಗಿ ಸರಕಾರದವರು ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಅವಾರ್ಡ್ ಆಗಿದ್ದರೂ ಕೂಡಾ ಭೂಮಿಯನ್ನು ಅವರು ವೆಕೇಟ್ ಮಾಡಿಕೊಟ್ಟಿಲ್ಲ ಅದನ್ನು ಅಳತೆ ಮಾಡಿಸಬೇಕೆಂದರೆ ಇಡೀ ತಾಲ್ಲೂಕಿಗೆ ಒಬ್ಬನೇ ಒಬ್ಬ ಸರ್ವೇಯರ್ ಇದ್ದು ಈ ಕಾರ್ಯಕ್ರಮ ಕುಂಠಿತವಾಗುತ್ತಿದೆ. ಸರ್ವೇಯರ್‌ಗಳು ಇಲ್ಲದಿರುವುದರಿಂದ ಈ ಸಮಸ್ಯೆ ಉಂಟಾಗಿದೆ ಇದನ್ನು ಪರಿಹಾರ ಮಾಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಈಗ ನನ್ನ ಬಳಿ ಇರತಕ್ಕಂಥ ಮಾಹಿತಿ ಪ್ರಕಾರ 50 ಸರ್ವೇಯರ್ ಪೈಕಿ ಒಂದು ಮಾತ್ರ ವೇಕೆನ್ಸಿ ಇದೆ ತಾಲ್ಲೂಕು ಮಟ್ಟದಲ್ಲಿ ಒಬ್ಬನೇ ಒಬ್ಬ ಸರ್ವೇಯರ್ ಇರುತ್ತಾನೆ. ಉಳಿದವರು ಹೋಬಳಿ ಮಟ್ಟದಲ್ಲಿ ಇರುತ್ತಾರೆ. ತಾಲ್ಲೂಕಿನಲ್ಲಿ ಖಾಲಿ ಇದೆ ಎನ್ನತಕ್ಕಂಥ ವಿಚಾರ ಹೇಳಿದ್ದಾರೆ ಒಂದು ಮಾತ್ರ ಖಾಲಿ ಇದೆ ಎಂದು ಹೇಳಿದ್ದೇನೆ. ಅಡಿಷನಲ್ ಆಗಿ ಬೇಕಾದರೆ ನಾವು ಈಗ ಅಕ್ರಮ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸತಕ್ಕಂಥ ಕಾರ್ಯಕ್ರಮ ಮತ್ತು ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಸರ್ವೆ ಮಾಡತಕ್ಕದ್ದು ಈಗಾಗಲೇ ಮಾನ್ಯ ಹಿರಿಯ ಸದಸ್ಯರು ಹೇಳಿದಹಾಗೆ ಕೆರೆ ಅಂಗಳಗಳು ಹಾಗೂ ಬೇರೆ ಸರಕಾರಿ ಜಮೀನುಗಳನ್ನು ಸುರಕ್ಷಿತವಾಗಿ ಇಡಬೇಕು ಎಂದರೆ ಅದಕ್ಕೂ ಕೂಡ ಸರ್ವೆ ಮಾಡಬೇಕಾಗುತ್ತದೆ. ಈಗಾಗಲೇ ನಾನು ಹೇಳಿದಹಾಗೆ ಒಂದು ಸಾವಿರ ಹೊಸ ಹುದ್ದೆಗಳನ್ನು ಮಂಜೂರು ಮಾಡಬೇಕೆಂದಿದ್ದೇವೆ. ತಕ್ಷಣ ರೆಕ್ರೂಟ್‌ಮೆಂಟ್ ಮಾಡಿ ಅಡಿಷನಲ್ ಆಗಿ ಎಲ್ಲೆಲ್ಲಿ ಬೇಕು ಅಲ್ಲಿಗೆ ಒದಗಿಸತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ವಿ. ಉಮಾಪತಿ: ಎಷ್ಟು ದಿನಗಳ ಒಳಗಾಗಿ ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಶೀಘ್ರವಾಗಿ ಒದಗಿಸುತ್ತೇವೆ.

ಶ್ರೀ ಎನ್.ಜಿ. ನಾಯಕ್: ಸನ್ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರದಲ್ಲಿ ಒಬ್ಬರೇ ಸರ್ವೇಯರ್ ಇರುವುದು. ಈಗ ಸರಕಾರದವರು ಸಾವಿರಾರು ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸಾವಿರಾರು ಮನೆಗಳನ್ನು ಒಂದು ಕ್ಷೇತ್ರಕ್ಕೆ ಕೊಡಬೇಕೆಂದರೆ ಸೈಟ್ ಬೇಕಲ್ಲ ಅದನ್ನು ಒಬ್ಬನೇ ಸರ್ವೇ ಮಾಡುವುದಕ್ಕೆ ಆಗುತ್ತದೆಯೇ? ಎಕ್ಸ್ಟ್ರಾ ಸರ್ವೇಯರ್ ಕೊಟ್ಟು ಮಾಡಿದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತು ನಡೆಯುತ್ತದೆ. ಇಲ್ಲದೇ ಹೋದರೆ ಸುಳ್ಳಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಪತ್ರವಿತರಣ ಅರ್ಜಿಗಳ ಸಂಖ್ಯೆ

3540 ಶ್ರೀ ವಸಂತ ವಿ. ಸಾಲಿಯಾನ(ಕಾಪು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಪತ್ರ ವಿತರಣದ ಅರ್ಜಿ ಪತ್ರಗಳನ್ನು ಸ್ವೀಕರಿಸುವರೇ?

ಆ) ಸರ್ಕಾರ ಸೂಚನೆ ನೀಡಿದ ನಂತರ ಇಮವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ?

ಇ) ಅರ್ಜಿ ಸಲ್ಲಿಸಲು ನೀಡಲಾದ ಅಂತಿಮ ದಿನಾಂಕವನ್ನು ಸರ್ಕಾರ ಮುಂದುವರಿಸಲು ಯೋಚಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು; ಒತ್ತುವರಿ ಸರ್ಕಾರಿ ಜಮೀನುಗಳನ್ನು ಸಕ್ರಮಗೊಳಿಸಲು ಅರ್ಜಿಗಳನ್ನು